# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಹುಬ್ಬಳ್ಳಿಯಲ್ಲಿ ಪ್ರಜ್ಞಾ ಪ್ರವಾಹದ ವತಿಯಿಂದ ಶಿವರಾತ್ರಿಯಂದು ನಡೆದ 'ಶಿವೋsಹಂ'– ವೈಚಾರಿಕ ಜಾಗರಣ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಪ್ರಾಂತ ಪ್ರಚಾರಕರಾದ ಶ್ರೀ ನರೇಂದ್ರ ಅವರು ಮಾರ್ಗದರ್ಶನ ಮಾಡಿದರು.


ಸಂಪುಟ : 44 | ಸಂಚಿಕೆ : 22 | ಫಾಲ್ಗುಣ–ಚೈತ್ರ | ಕಲಿಯುಗಾಬ್ದ 5124 | 01–03–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಗ್ರಾಹಕರ ಅರಿವು, ದೇಶದ ಬಲವು

ಗ್ರಾಹಕ ಶೋಷಣೆಗೆ ಒಳಗಾಗದ ಕ್ಷೇತ್ರವಿಲ್ಲ. ಜಗತ್ತಿನಾದ್ಯಂತ ಪ್ರಯತ್ನಿಸಿದ ಬಂಡವಾಳಶಾಹಿ, ಕಮ್ಯುನಿಸಂ, ಸಮಾಜವಾದದಂತಹ ಎಲ್ಲಾ ಆರ್ಥಿಕ ವ್ಯವಸ್ಥೆಗಳು ಗ್ರಾಹಕರಿಗೆ ನ್ಯಾಯವನ್ನು ನೀಡುವಲ್ಲಿ ವಿಫಲವಾಗಿವೆ. ಆದ್ದರಿಂದ ಗ್ರಾಹಕರನ್ನು ಸಂಘಟಿಸಲು ಮತ್ತು ಹಿಂಸೆಗೆ ಒಳಗಾಗದೆ ಅನ್ಯಾಯವನ್ನು ವಿರೋಧಿಸಲು, ಅದರ ವಿರುದ್ಧ ಧ್ವನಿ ಎತ್ತಲು ಹಾಗು ಭ್ರಷ್ಟರು, ಮೋಸಗಾರರು ಮತ್ತು ಶೋಷಕರನ್ನು ಬಹಿಷ್ಕರಿಸಲು ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಒದಗಿಸುವುದು ಅವಶ್ಯಕ.

ಪಾಶ್ಚಾತ್ಯ ಗ್ರಾಹಕ ವಾದವು ಅರ್ಥ ಮತ್ತು ಕಾಮವನ್ನು ಮಾತ್ರ ಆಧರಿಸಿದೆ ಮತ್ತು ಭಾರತೀಯ ತತ್ವಶಾಸ್ತ್ರವು ಧರ್ಮ ಮತ್ತು ಮೋಕ್ಷ ಎಂಬ ಎರಡು ಇತರ ಸ್ತಂಭಗಳನ್ನು ಆಧರಿಸಿದೆ. ಧರ್ಮದ ಪ್ರಧಾನ ಗುರಿಯು ಎರಡು ಶಕ್ತಿಗಳ ಎರಡು ಸಂಘರ್ಷದ ಗುರಿಗಳು ಮತ್ತು ಚಟುವಟಿಕೆಗಳನ್ನು ಪರಿಹರಿಸುವುದಾಗಿದೆ. ತಯಾರಕರು, ವಿತರಕರು, ಚಿಲ್ಲರೆ ವ್ಯಾಪಾರಿಗಳು, ಮಾರಾಟಗಾರರು ಇತ್ಯಾದಿಗಳನ್ನು ಒಳಗೊಂಡಿರುವ ಮಾರುಕಟ್ಟೆ ರಚನೆಯಿಂದ ಒಂದ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ ಮತ್ತು ಇನ್ನೊಂದು ವ್ಯವಸ್ಥೆಯನ್ನು ಗ್ರಾಹಕರು ಪ್ರತಿನಿಧಿಸುತ್ತಾರೆ. ಈ ಎರಡು ಪರಸ್ಪರ ವಿರುದ್ಧ ವಾದ ಶಕ್ತಿಗಳನ್ನು ಸಮನ್ವಯಗೊಳಿಸುವ ಮತ್ತು ಪರಸ್ಪರ ತೃಪ್ತಿಗಾಗಿ ಅವರ ನಡವಳಿಕೆಯ ಮಾದರಿಯನ್ನು ನಿಯಂತ್ರಿಸುವ ಪರಿಕಲ್ಪನಾ ತತ್ವವು "ಧರ್ಮ" ಆಗಿದೆ, ಇದು ಅಂತಿಮವಾಗಿ ಮೋಕ್ಷಕ್ಕೆ ಕಾರಣವಾಗುತ್ತದೆ.

### ಗ್ರಾಹಕರ ಬೆನ್ನಿಗೆ ನಿಂತ ಗ್ರಾಹಕ ರಕ್ಷಣಾ ಕಾಯಿದೆ

ಪ್ರತಿ ವರ್ಷ ಭಾರತದಾದ್ಯಂತ ಡಿಸೆಂಬರ್ 24ರಂದು ರಾಷ್ಟ್ರೀಯ ಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ. 1986 ಡಿಸೆಂಬರ್ 24ರಂದು ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ದಿನ. ಉದಾರೀಕರಣ ಮತ್ತು ಜಾಗತೀಕರಣದ ಬಳಿಕ ಭಾರತ ಜಗತ್ತಿನ 2ನೇ ಅತಿದೊಡ್ಡ ಗ್ರಾಹಕರನ್ನು ಹೊಂದಿರುವ ದೇಶ. ಹಾಗಾಗಿ ಗ್ರಾಹಕರ ಅಥವಾ ಬಳಕೆದಾರರ ಶೋಷಣೆ ನಿಲ್ಲಿಸಲು ಹಾಗೂ ಅನುಚಿತ ಮತ್ತು ವ್ಯವಹಾರದಲ್ಲಿ ವಂಚಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ನಿಟ್ಟಿನಲ್ಲಿ ಭಾರತ ಸರಕಾರ ಈ ಕಾಯ್ದೆಯನ್ನು ಜಾರಿಗೊಳಿಸಿತು.

ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ 'ಗ್ರಾಹಕ ಸಂರಕ್ಷಣಾ ಕಾಯ್ದೆ –2019' ಯನ್ನು ಜುಲೈ 20 ರಿಂದ ಅಧಿಕೃತವಾಗಿ ಜಾರಿಗೊಳಿಸಿದೆ. ಇದರೊಡನೆ ಗ್ರಾಹಕರ ಸುರಕ್ಷತೆಗೆ ಆದ್ಯತೆ ಎಂಬ ವಾದಕ್ಕೆ ಇನ್ನಷ್ಟು ಬಲ ಲಭಿಸಿದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ, 1986 ಅನ್ನು ಬದಲಿಸಿ ಗ್ರಾಹಕ ಸಂರಕ್ಷಣಾ ಕಾಯ್ದೆ, 2019ಗೆ ರಾಷ್ಟ್ರಪತಿ ಕೋವಿಂದ್ 2019 ಆಗಸ್ಟ್ 9ರಂದು ಅಂಕಿತ ಹಾಕಿದ್ದರು. ಅಧಿಸೂಚನೆಗಳನ್ನು ನೀಡುವ ಮೂಲಕ ಜುಲೈ 20 ರಿಂದ ಗ್ರಾಹಕ ಸಂರಕ್ಷಣಾ ಕಾಯ್ದೆ –2019 ಅನ್ನು ಜಾರಿಗೆ ತರಲಾಗಿದೆ. ಈ ಕಾನೂನು ತುಂಬಾ ಕಟ್ಟುನಿಟ್ಟಾಗಿದೆ ಮತ್ತು ಗ್ರಾಹಕರಿಗೆ ಹೆಚ್ಚಿನ ಹಕ್ಕುಗಳನ್ನು ನೀಡುತ್ತದೆ. ಹೊಸ ಕಾನೂನು ಗ್ರಾಹಕ ಸಂರಕ್ಷಣಾ ಕಾಯ್ದೆ 2019 ಗ್ರಾಹಕ ಸಂರಕ್ಷಣಾ ಕಾಯ್ದೆ 1986 ಅನ್ನು ಬದಲಿಸಿದೆ. ಈ ಕಾಯ್ದೆಯು ದೇಶವ್ಯಾಪಿ ಜಾರಿಗೊಳ್ಳುತ್ತಿದೆ. ಗ್ರಾಹಕರ ಹಿತದೃಷ್ಟಿಯಿಂದ 1986ರ ಗ್ರಾಹಕರ ರಕ್ಷಣಾ ಕಾಯ್ದೆಗೆ ಕೇಂದ್ರ ಸರ್ಕಾರ 2019 ಜುಲೈ ತಿಂಗಳಲ್ಲೇ ಸಂಪೂರ್ಣ ಬದಲಾವಣೆ ತಂದಿತ್ತು. ಗ್ರಾಹಕರ ರಕ್ಷಣಾ ಪ್ರಾಧಿಕಾರ 109 ಅಂಶಗಳಲ್ಲಿ ಬದಲಾವಣೆ ತಂದಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಗ್ರಾಹಕರ ಹಕ್ಕುಗಳನ್ನು ರಕ್ಷಿಸಲಿದೆ, ಇ–ವಾಣಿಜ್ಯ ನೇರ ಮಾರಾಟ ಹಾಗೂ ಟೆಲಿ ಮಾರ್ಕೆಟಿಂಗ್ ಇತ್ಯಾದಿ ಪ್ರಸಕ್ತ ವ್ಯವಹಾರಗಳನ್ನು ಕೇಂದ್ರೀಕರಿಸಿ ಬದಲಾವಣೆ ತರಲಾಗಿದೆ. ಇದು ಹೊಸ ಮತ್ತು ಕ್ರಾಂತಿಕಾರಿ ಹೆಜ್ಜೆಯಾಗಿದ್ದು ಗ್ರಾಹಕರ ಹಕ್ಕುಗಳಿಗೆ ಹೆಚ್ಚಿನ ಬಲವನ್ನು ನೀಡುತ್ತದೆ. ಈ ಮೂಲಕ ಮಾರ್ಚ್ 15ರಂದು ಗ್ರಾಹಕರ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ.




### ಗ್ರಾಹಕರಿಗೆ ಅರಿವು ಅತ್ಯಗತ್ಯ

- ಗ್ರಾಹಕ ಹಕ್ಕು, ಸುರಕ್ಷತೆ ಹಕ್ಕು
- ವ್ಯವಹಾರ ನಿಬಂಧನೆ,
- ಸರಕು ಅಥವಾ ಉತ್ಪನ್ನಗಳ ಗುಣಮಟ್ಟ , ಸರಕು ಅಥವಾ ಸೇವೆಯ ಮಾಹಿತಿ ಪಡೆದುಕೊಳ್ಳುವ ಹಕ್ಕು
- ಆಯ್ಕೆಯ ಅವಕಾಶ, ನಮಗಿಷ್ಟವಾದುದನ್ನು ಆಯ್ಕೆ ಮಾಡುವ ಹಕ್ಕು
- ಮೌಲ್ಯಕ್ಕೆ ಪ್ರತಿಯಾಗಿ ಪಡೆಯುವ ಸೇವೆಯ ಪ್ರಾಮಾಣಿಕತೆ, ಇತ್ಯಾದಿ.

### ಗ್ರಾಹಕ ಹಕ್ಕುಗಳ ಬಗೆಗಿನ ಜ್ಞಾನ ಅವಶ್ಯ

ಪ್ರತಿಯೊಬ್ಬರೂ ಗ್ರಾಹಕರ ಹಕ್ಕುಗಳ ಕುರಿತು ತಿಳಿವಳಿಕೆ ಹೊಂದಿರುವುದು ಅತ್ಯವಶ್ಯ:

- ವಂಚನೆಯ ವಿರುದ್ಧ ಹೋರಾಡಬೇಕು
- ಕಾಲಕ್ಕನುಗುಣವಾಗಿ ಕೆಲವು ತಿದ್ದುಪಡಿ
- ದೂರು ಸಲ್ಲಿಸಬಹುದು
- ಹಕ್ಕುಗಳ ಬಗ್ಗೆ ಎಲ್ಲರಿಗೂ ಅರಿವಿರಬೇಕು

- ವಂಚನೆಯ ವಿರುದ್ಧ ಹೋರಾಡಬೇಕು: ಸಮಾಜದಲ್ಲಿ ಬದುಕಬೇಕಾದರೆ ಸಂವಿಧಾನ ಒದಗಿಸಿರುವ ಎಲ್ಲಾ ಹಕ್ಕುಗಳ ಬಗೆಗಿನ ಜ್ಞಾನ ಅಗತ್ಯ. ಇಲ್ಲಿ ಮೋಸ ನಡೆಯುತ್ತಲೇ ಇರುತ್ತದೆ. ಸುಳ್ಳು ಜಾಹೀರಾತುಗಳು ನೋಡುಗರನ್ನು ಮರುಳು ಮಾಡುತ್ತಲೇ ಇರುತ್ತವೆ. ಇಂಥ ಸಮಯದಲ್ಲಿ ನಮ್ಮ ಹಕ್ಕುಗಳನ್ನು ಬಳಸಿ, ವಂಚನೆಯ ವಿರುದ್ಧ ಹೋರಾಡಬೇಕು. ಈ ಜಾಗೃತಿ ಪ್ರತಿಯೊಬ್ಬರಲ್ಲೂ ಮೂಡಬೇಕು.

- ದೂರು ಸಲ್ಲಿಸಬಹುದು: ಗ್ರಾಹಕರು ಎಂದಾಕ್ಷಣ ಕೇವಲ ಅಂಗಡಿ ವ್ಯಾಪಾರ ನಮ್ಮ ಕಣ್ಣ ಮುಂದೆ ಬರುವುದು ಸಹಜ. ಆದರೆ ಗ್ರಾಹಕರು ಎಂಬ ಸೂಚ್ಯ ಎಲ್ಲಾ ವೃತ್ತಿಗಳಿಗೂ ಅನ್ವಯವಾಗುತ್ತದೆ. ಒಬ್ಬ ವೈದ್ಯರ ಬಳಿ ಹೋಗುವ ರೋಗಿ, ವಕೀಲರಲ್ಲಿಗೆ ತೆರಳುವ ಕಕ್ಷಿದಾರ, ಒಬ್ಬ ವಿದ್ಯಾರ್ಥಿ ಪ್ರತಿಯೊಬ್ಬರೂ ಗ್ರಾಹಕರೇ ಆಗುತ್ತಾರೆ. ಯಾವುದೇ ಸಂದರ್ಭದಲ್ಲಿ ಒಬ್ಬ ಗ್ರಾಹಕ ಮೋಸ ಹೋದಲ್ಲಿ, ಗ್ರಾಹಕರ ರಕ್ಷಣಾ ಕಾಯ್ದೆಯಡಿ ಆತ ದೂರು ಸಲ್ಲಿಸಬಹುದು ಎಂದರು.

- ಹಕ್ಕುಗಳ ಬಗ್ಗೆ ಎಲ್ಲರಿಗೂ ಅರಿವಿರಬೇಕು: ಪ್ರತಿಯೊಬ್ಬನೂ ಒಂದಲ್ಲಾ ಒಂದು ರೀತಿಯಲ್ಲಿ ಗ್ರಾಹಕನಾಗಿರುತ್ತಾನೆ. ಹೀಗಾಗಿ ತನ್ನ ಹಕ್ಕುಗಳ ಬಗ್ಗೆ ಎಲ್ಲರಿಗೂ ಅರಿವಿರಬೇಕು. ಸ್ವಸ್ಥ ಸಮಾಜವನ್ನು ನಿರ್ಮಿಸಲು ಗ್ರಾಹಕ ತನ್ನ ಹಕ್ಕುಗಳನ್ನು ಸಮರ್ಥವಾಗಿ ಬಳಸಬೇಕು.

### ಗ್ರಾಹಕ ರಕ್ಷಣಾ ಕಾಯ್ದೆಯಲ್ಲಿರುವ ಮಹತ್ವದ ಬದಲಾವಣೆ ಏನು? ಗ್ರಾಹಕರಿಗೆ ಇದರಿಂದ ಆಗುವ ಲಾಭವಾದರೂ ಏನು?

ಜಿಲ್ಲಾ ಗ್ರಾಹಕರ ವೇದಿಕೆಯನ್ನು ಜಿಲ್ಲಾ ಆಯೋಗ ಎಂದು ಮರುನಾಮಕರಣ ಮಾಡಲಾಗಿದೆ. ಜಿಲ್ಲಾ ಆಯೋಗದ ತೀರ್ಪಿನ ವಿರುದ್ಧ ರಾಜ್ಯ ಆಯೋಗದಲ್ಲಿ ಮೇಲ್ಮನವಿ ಸಲ್ಲಿಸಬೇಕಾದಲ್ಲಿ ಜಿಲ್ಲಾ ಆಯೋಗ ಆದೇಶಿಸಿದ ಮೊತ್ತದ ಶೇ.50 ರಷ್ಟು ಮೊತ್ತವನ್ನು ಠೇವಣಿ ಇಡಬೇಕು. ಈ ಹಿಂದೆ ಈ ಠೇವಣಿಯ ಗರಿಷ್ಠ ಮೊತ್ತ 25,000 ರೂಪಾಯಿ ಆಗಿತ್ತು.

ಮಸೂದೆಯು ಸರಳೀಕೃತ ವಿವಾದ ಪರಿಹಾರ ಪ್ರಕ್ರಿಯೆಯನ್ನು ಸಹ ರೂಪಿಸುತ್ತದೆ, ಮಧ್ಯಸ್ಥಿಕೆ ಮತ್ತು ಪ್ರಕರಣಗಳ ಇ–ಫೈಲಿಂಗ್ಗೆ ಅವಕಾಶವಿದೆ. ಗ್ರಾಹಕನು ತಾನು ವಾಸಿಸುವ ವ್ಯಾಪ್ತಿಯಲ್ಲಿ ಹತ್ತಿರದ ಆಯೋಗದಲ್ಲಿ ಪ್ರಕರಣಗಳನ್ನು ದಾಖಲಿಸಲು ಸಾಧ್ಯವಾಗುತ್ತದೆ. ಗ್ರಾಹಕರು ಎಲ್ಲಿಂದಲಾದರೂ ದೂರುಗಳನ್ನು ಸಲ್ಲಿಸಬಹುದು ಮತ್ತು ಅವರು ತಮ್ಮ ಪ್ರಕರಣಗಳನ್ನು ಪ್ರತಿನಿಧಿಸಲು ವಕೀಲರನ್ನು ನೇಮಿಸಿಕೊಳ್ಳುವ ಅಗತ್ಯವಿಲ್ಲ. ಮಧ್ಯಸ್ಥಿಕೆಗಾಗಿ, ನಿಯಮಗಳಲ್ಲಿ ಕಟ್ಟುನಿಟ್ಟಾದ ಟೈಮ್‌ಲೈನ್ ಅನ್ನು ನಿಗದಿಪಡಿಸಲಾಗಿದೆ

ಇ–ಕಾಮರ್ಸ್ ಅನ್ನು ತನ್ನ ವ್ಯಾಪ್ತಿಯಲ್ಲಿ ತರುವುದು ಸೇರಿದಂತೆ ವಿವಿಧ ನಿಬಂಧನೆಗಳನ್ನು ಪರಿಚಯಿಸುವ ಮೂಲಕ ಅದರ ವ್ಯಾಪ್ತಿಯನ್ನು ವಿಸ್ತರಿಸುವುದರೊಂದಿಗೆ, ಹೊಸ ಅಧಿಕಾರಗಳನ್ನು ಸ್ಥಾಪಿಸುವ ಮೂಲಕ ಗ್ರಾಹಕರ ಹಕ್ಕುಗಳನ್ನು ರಕ್ಷಿಸುವ ಮತ್ತು ಬಲಪಡಿಸುವ ಉದ್ದೇಶ ಹೊಂದಿದೆ. ಅಲ್ಲದೆ ಹೊಸ ಕಾಯಿದೆ, ಉತ್ಪನ್ನ ತಯಾರಕರು, ಎಲೆಕ್ಟ್ರಾನಿಕ್ ಸೇವಾ ಪೂರೈಕೆದಾರರು, ದಾರಿತಪ್ಪಿಸುವ ಜಾಹೀರಾತುದಾರರನ್ನು ನಿಯಂತ್ರಿಸಲಿದೆ.

ಸದಸ್ಯರ ಸಂಖ್ಯೆ, ಗೌರವ ಮತ್ತು ಸಿಬ್ಬಂದಿ ಕೇಡರ್ ಸಂಖ್ಯೆಯಲ್ಲಿ ಗ್ರಾಹಕ ನ್ಯಾಯಾಲಯಗಳಲ್ಲಿ ಬದಲಾವಣೆ ಆಗಲಿದ್ದು ಈ ಕಾಯ್ದೆಯಲ್ಲಿ ಕೇಂದ್ರೀಯ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಕ್ಕೆ ಅವಕಾಶ ಸಿಕ್ಕಲಿದೆ.

ಹೊಸ ಕಾಯಿದೆಯ ಮೂಲಕ, ತಯಾರಿಸಿದ ಉತ್ಪನ್ನಗಳ ಪರೀಕ್ಷೆಯನ್ನು ಖರೀದಿಸುವ ಮೊದಲು, ಖರೀದಿಸುವ ಸಮಯದಲ್ಲಿ ಅಥವಾ ನಂತರ ಅನೇಕ ಹಂತಗಳಲ್ಲಿ ಮಾಡಬಹುದು, ಮತ್ತು ಉತ್ಪನ್ನವು ಯಾವುದೇ ಮಟ್ಟದಲ್ಲಿ ದೋಷಪೂರಿತವಾಗಿದೆ ಎಂದು ಕಂಡುಬಂದಲ್ಲಿ, ಉತ್ಪನ್ನದ ಸಂಪೂರ್ಣ ಬ್ಯಾಚ್ ಅನ್ನು ಮಾರುಕಟ್ಟೆಯಿಂದ ಹಿಂಪಡೆಯಲಾಗುವುದು. ಗ್ರಾಹಕರ ಹಕ್ಕುಗಳನ್ನು ಉತ್ತೇಜಿಸಲು, ರಕ್ಷಿಸಲು ಮತ್ತು ಜಾರಿಗೊಳಿಸಲು ಉದ್ದೇಶಿಸಿರುವ ಸಿಸಿಪಿಎ, ಅನ್ಯಾಯದ ಹಿನ್ನೆಲೆಯ ವ್ಯಾಪಾರದಿಂದ ಉಂಟಾಗುವ ವಿವಾದದಲ್ಲಿ ಗ್ರಾಹಕರ ಹಕ್ಕುಗಳನ್ನು ಕಾಪಾಡಲು ಮಧ್ಯಸ್ಥಿಕೆ ವಹಿಸುತ್ತದೆ. ಮರುಪಡೆಯುವಿಕೆ, ಮರುಪಾವತಿ ಮತ್ತು ಉತ್ಪನ್ನಗಳ ಲಾಭವನ್ನು ಒಳಗೊಂಡಂತೆ ವಿವಿಧ ಕ್ರಿಯೆಯನ್ನು ಸಹ ಇದು ಪ್ರಾರಂಭಿಸಬಹುದು.

ಈ ಕಾಯಿದೆಯು ಸರಳೀಕೃತ ವಿವಾದ ಪರಿಹಾರ ಪ್ರಕ್ರಿಯೆಯನ್ನು ಸಹ ರೂಪಿಸುತ್ತದೆ ಮತ್ತು ಪ್ರಕರಣಗಳ ಮಧ್ಯಸ್ಥಿಕೆ ಮತ್ತು ಇ–ಫೈಲಿಂಗ್ಗೆ ಅವಕಾಶವಿದೆ. ಗ್ರಾಹಕನು ತಾನು ವಾಸಿಸುವ ಪ್ರದೇಶದ ನ್ಯಾಯವ್ಯಾಪ್ತಿಯನ್ನು ಹೊಂದಿರುವ ಹತ್ತಿರದ ಆಯೋಗದಲ್ಲಿ ಪ್ರಕರಣಗಳನ್ನು ದಾಖಲಿಸಲು ಸಾಧ್ಯವಾಗುತ್ತದೆ. ಅಲ್ಲದೆ ಇದೇ ಮೊದಲ ಬಾರಿಗೆ, ಉತ್ಪನ್ನ ಹೊಣೆಗಾರಿಕೆಯನ್ನು ನಿರ್ವಹಿಸುವ ವಿಶೇಷ ಕಾನೂನು ಜಾರಿಗೊಳ್ಳಲಿದ್ದು ದೋಷಯುಕ್ತ ಉತ್ಪನ್ನ


4ನೇ ಪುಟಕ್ಕೆ...

## ಸಂಸ್ಮರಣೆ

# ಹುಯಿಲಗೋಳ ನಾರಾಯಣರಾಯರು (4ನೇ ಅಕ್ಟೋಬರ್ 1884 – 4ನೇ ಜುಲೈ 1971)

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಉದಯರಾಗದ ಮೂಲಕ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾದ ಮೇರು ವ್ಯಕ್ತಿತ್ವದ ಕವಿ ಹುಯಿಲಗೋಳ ನಾರಾಯಣರಾಯರು. ಕನ್ನಡ ನಾಡು-ನುಡಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ. ಅವರು ಕಾವ್ಯ, ನಾಟಕ, ವೈಚಾರಿಕ ಪ್ರಬಂಧ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯ ಲೋಕವನ್ನು ಬೆಳಗಿಸಿದವರು.

ಗದುಗಿನಲ್ಲಿ 1884 ಅಕ್ಟೋಬರ್ 4ರಂದು ಜನಿಸಿದರು. ತಂದೆ ಕೃಷ್ಣರಾಯರು ಆಗಿನ ಕಾಲದಲ್ಲಿ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಶಿಕ್ಷಕ ವೃತ್ತಿಯಲ್ಲಿದ್ದರು. ತಾಯಿ ರಾಧಾಬಾಯಿ(ಬಹಿಣಕ್ಕ)ಪ್ರಸಿದ್ಧ ಉಮಚಗಿ ಮನೆತನದ ರಾಮಣ್ಣ ನಾಯಕರ ಒಬ್ಬಳೇ ಮಗಳು. ಇವರ ಹಿರಿಯ ಮಗನೇ ನಾರಾಯಣರಾಯರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ನಂತರ ಅಜ್ಜ ರಾಮಣ್ಣ ನಾಯಕರ ಆಶ್ರಯದಲ್ಲಿ ಬೆಳೆದರು. ಅಜ್ಜಿ ಮತ್ತು ತಾಯಿ ಪುರಂದರದಾಸರ ಪದಗಳನ್ನು ಹೇಳುತ್ತಿದ್ದರು. ಚಿಕ್ಕಮ್ಮ ಶೇಷಕ್ಕ ಕುಮಾರವ್ಯಾಸ ಭಾರತವನ್ನು ಪಠಣ ಮಾಡುತ್ತಿದ್ದರು. ಹೀಗೆ ಸುಸಂಸ್ಕೃತವಾದ ಪರಿಸರದ ಪ್ರಭಾವ ಅವರ ಮೇಲೆ ಗಾಢವಾದ ಪರಿಣಾಮ ಬೀರಿ ಶತಮಾನದ ಶ್ರೇಷ್ಠ ನಾಡಕವಿಯಾಗಿ ರೂಪಗೊಳ್ಳುವಲ್ಲಿ ಪೋಷಕವಾದರು.

ತಂದೆ ಕೃಷ್ಣರಾಯರು ಗೋಕಾಕದಲ್ಲಿ ಕೆಲಸ ಮಾಡುತ್ತಿದ್ದರಿಂದ ನಾರಾಯಣರ ಪ್ರಾಥಮಿಕ ಶಿಕ್ಷಣ ಅಲ್ಲಿಯೇ ಆರಂಭವಾಯಿತು. ಅನಂತರ ಗದಗ, ಧಾರವಾಡಗಳಲ್ಲಿ ಮುಂದುವರೆಯಿತು. 1902ರಲ್ಲಿ ಧಾರವಾಡದ ಸರಕಾರಿ ಮಾಧ್ಯಮಿಕ ಶಾಲೆಯಿಂದ ಮ್ಯಾಟ್ರಿಕ್ ಈಗಿನ (ಎಸ್.ಎಸ್.ಎಲ್.ಸಿ) ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಬಾಲ್ಯದಲ್ಲೇ ಸೂತ್ರದ ಗೊಂಬೆಯಾಟ, ಕಿಳ್ಳಿಕ್ಯೇತರ ಆಟ, ಸಣ್ಣಾಟ, ಬಯಲಾಟ, ದೊಡ್ಡಾಟಗಳನ್ನು ನೋಡುವ ಹವ್ಯಾಸ ಬೆಳೆದಿತ್ತು. ಹೀಗಾಗಿ ಮಾಧ್ಯಮಿಕ ಶಾಲೆಯಲ್ಲಿ ಇರುವಾಗಲೇ 'ಇಂದ್ರಜೀತವಧೆ', 'ಗರುಡ ಗರ್ವಭಂಗ' ಎಂಬ ನಾಟಕವನ್ನು ತಾವೇ ಮಾರ್ಪಾಡಿಸಿಕೊಂಡು ಬರೆದು ಆಡಿದ ನಾಟಕಗಳಾಗಿದ್ದವು.

ಹಲವು ಪ್ರಾಂತಗಳಾಗಿ ಹಂಚಿಹೋಗಿದ್ದ ಕನ್ನಡ ನಾಡಿನಲ್ಲಿ ಜ್ಞಾನಾರ್ಜನೆಗಾಗಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಪುಣೆ, ಮುಂಬಯಿಗಳಿಗೆ ಹೋಗುತ್ತಿದ್ದರು. ನಾರಾಯಣರೂ ರ್‍ಯಾಂಗಲರ್ ಪರಾಂಜಪೆಯವರು ಪ್ರಿನ್ಸಿಪಾಲರಾಗಿದ್ದ ಪುಣೆಯ ಫರ್ಗೂಸನ್ ಕಾಲೇಜನ್ನು ಸೇರಿದರು. ಆಗ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾದರು. ತರುಣರಾಗಿದ್ದ ಅವರಲ್ಲಿ ಸ್ವಾಭಾವಿಕವಾಗಿಯೇ ರಾಷ್ಟ್ರಪ್ರೇಮದ ಸೆಳೆತ ಕಾಣಿಸಿಕೊಂಡಿತು. ಪುಣೆಯಲ್ಲಿ ಮರಾಠಿ ಭಾಷೆಯು ಕೇಂದ್ರಬಿಂದುವಾದುದರಿಂದ ಅಲ್ಲಿ ಕನ್ನಡಕ್ಕೆ ಸ್ಥಾನವಿರಲಿಲ್ಲ. ಕಾಲೇಜಿನ ಗ್ರಂಥಾಲಯದಲ್ಲಿ ಕನ್ನಡದ ಪುಸ್ತಕಗಳಿರಲಿಲ್ಲ. ನಾರಾಯಣರಾಯರು ಪ್ರಾಚಾರ್ಯರಿಗೆ ಮನವಿ ಮಾಡಿ ಕನ್ನಡ ಪುಸ್ತಕಗಳನ್ನು ಖರೀದಿಸಲು ಕಾರಣರಾದರು. ಕನ್ನಡಿಗರಲ್ಲಿ ಭಾಷಾ ಪ್ರೇಮವಿಲ್ಲದಿರುವುದನ್ನು ಕಂಡು ತುಂಬಾ ಮನಸ್ಸಿಗೆ ನೋವಾಯಿತು. ಕನ್ನಡ ಭಾಷೆಗೆ ಮತ್ತು ಕನ್ನಡದ ಪುಸ್ತಕಗಳಿಗೆ ಅಪಮಾನ ಮಾಡಬಾರದೆಂದು ಕಳಕಳಿಯ ಮನವಿ ಮಾಡಿದ್ದರು.

ಒಮ್ಮೆ ಕನ್ನಡ ವಿದ್ಯಾರ್ಥಿಗಳ ಸಂಘವು ಗಜಾನನೋತ್ಸವವನ್ನು ಆಚರಿಸಲಾರಂಭಿಸಿದ ನಂತರ ಮರಾಠಿ ವಿದ್ಯಾರ್ಥಿಗಳು 'ಕನ್ನಡದಲ್ಲಿ ಏನಿದೆ'? ಎಂದು ಅಪಹಾಸ್ಯ ಮಾಡಲು ನಾರಾಯಣರಾಯರು ಆಗಲೇ ಕನ್ನಡ ಪದ್ಯವನ್ನು ಕಟ್ಟಿ ಹಾಡಿದ್ದರಂತೆ. 1907ರಲ್ಲಿ ಸಂಸ್ಕೃತ ಮತ್ತು ಇಂಗ್ಲೀಷ ಭಾಷೆಗಳನ್ನು ಆಯ್ದುಕೊಂಡು ಬಿ.ಎ. ಪದವಿಯನ್ನು ಪಡೆದರು. ಈ ವೇಳೆಗೆ ಮಲೇರಿಯಾ ರೋಗ ಕಾಣಿಸಿಕೊಳ್ಳಲು ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಲು ಧಾರವಾಡದಲ್ಲಿ ನೆಲೆಸಿದರು. ಆ ಅವಧಿಯಲ್ಲಿ ವಿಕ್ಟೋರಿಯಾ ಹೈಸ್ಕೂಲಿನಲ್ಲಿ (ಈಗಿನ ವಿದ್ಯಾರಣ್ಯ ಹೈಸ್ಕೂಲ್) ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಆಗ ಅಲ್ಲಿ ವರಕವಿ 'ದ.ರಾ. ಬೇಂದ್ರೆ'ಯವರು ವಿದ್ಯಾರ್ಥಿಯಾಗಿದ್ದರು. ಆಗ ಶೇಕ್ಸ್‌ಪಿಯರ್ ಕವಿಯ "The Merchant of Venice" ನಾಟಕವನ್ನು ವಿದ್ಯಾರ್ಥಿಗಳಿಂದ ಆಡಿಸಿದ್ದರು. ಬೇಂದ್ರೆಯವರ ಜಾಣ್ಮೆಯನ್ನು ಮೊದಲೇ ಅರಿತ ನಾರಾಯಣರಾಯರು ಅವರನ್ನು ಗದುಗಿನಲ್ಲಿ ತಾವು ಸ್ಥಾಪಿಸಿದ ವಿದ್ಯಾದಾನ ಸಮಿತಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕ ಮಾಡಿಕೊಂಡರು. ಬೆಳೆಯುವ ಪೈರು ಮೊಳಕೆಯಲ್ಲಿ ನೋಡು, ಎಂಬಂತೆ ಬಾಲ್ಯದಲ್ಲಿಯೇ ಅವರಿಗೆ ಸಾಹಿತ್ಯದ ಕಡೆಗೆ ಒಲವು ಮೂಡಿತು.

1908ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಮೊಟ್ಟಮೊದಲು ಸಾಹಿತ್ಯ ಸಮ್ಮೇಳನಕ್ಕೆ ನಾರಾಯಣರಾಯರು ಹೋಗಿದ್ದರು. ನಂತರ "ಕನಸು" ಎಂಬ ಕವನ ಪ್ರಕಟವಾಯಿತು. 1910ರಲ್ಲಿ 'ವಜ್ರಮುಕುಟ' ಎಂಬ ನಾಟಕವನ್ನು ರಚಿಸಿದರು. ಮುಂದೆ ಮುಂಬಯಿಯ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಪದವಿಯನ್ನು ಪಡೆದು ಗದುಗಿನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು.



**ಆಸಕ್ತಿ :** ನಾರಾಯಣರಾಯರು ಭಕ್ತಿಯ ಪರಿಸರದಲ್ಲಿ ಬೆಳೆದವರು. ಬಾಲಕನಾಗಿರುವಾಗಲೇ ಕುಮಾರವ್ಯಾಸ ಭಾರತದ ಶ್ರವಣ ದಾಸರ ಪದಗಳನ್ನು ಹೇಳುವುದರಲ್ಲಿ ಆಸಕ್ತಿ ಮೂಡಿಸಿಕೊಂಡರು. ಅವರ ತಾಯಿ ಮತ್ತು ಅಜ್ಜಿಯ ದಿನನಿತ್ಯದ ಹಾಡುಗಳನ್ನು ಕೇಳಿ ತಿಳಿದುಕೊಳ್ಳುವುದೆಂದರೆ ತುಂಬಾ ಆಸಕ್ತಿ ಹೀಗಾಗಿ ಅವರ ನರ ನಾಡಿಗಳಲ್ಲಿ ಭಕ್ತಿರಸ ತುಂಬಿಕೊಂಡಿತ್ತು. ದೊಡ್ಡಾಟಗಳು ಎಂದರೆ ವಿಶೇಷ ಆಸಕ್ತಿ, ಅವುಗಳನ್ನು ನೋಡದೇ ಇರುವ ದಿನಗಳೇ ಇಲ್ಲ, ತಮ್ಮ ಮನೆಮಂದಿಯರೊಡನೆ ಚಕ್ಕಡಿ ಮಾಡಿಕೊಂಡು ದೊಡ್ಡಾಟಗಳನ್ನು ನೋಡಿ ಬರುತ್ತಿದ್ದರಂತೆ, ವಿದ್ಯಾರ್ಥಿ ಜೀವನದಲ್ಲಿಯೇ ನಾಟಕಗಳನ್ನು ನೋಡುವ ಹಾಗೂ ಬರೆಯುವ ಒಲವು ಮೂಡಿತು. ಮುಂದಿನ ದಿನಗಳಲ್ಲಿ ರಂಗಭೂಮಿ ಮತ್ತು ನಾಟಕ ಆಸಕ್ತಿಯ ಕ್ಷೇತ್ರಗಳಾದವು.

06–10–1905ರಲ್ಲಿ ಬಂಗಾಲ ವಿಭಜನೆಯಾಯಿತು. ಬ್ರಿಟಿಷರ್ "Divide and rule policy" ಧೋರಣೆಯನ್ನು ಅನುಸರಿಸಿದರು. ಈ ಒಡೆದು ಆಳುವ ನೀತಿಯಿಂದ ಭಾರತೀಯರು ಕೆರಳಿದ್ದರು. 'ವಂಗಭಂಗ' ಘಟನೆಯು ಭಾಷಾ ಪ್ರಧಾನ ಚಳುವಳಿಗಳ ಹಿನ್ನಲೆಯಲ್ಲಿ ಬಹಳ ಮಹತ್ವದ್ದು.

'ವಂಗಭಂಗ ಚಳುವಳಿಯ ಚಂಡಮಾರುತ ಭಾರತದ ಮೂಲೆ ಮೂಲೆಗೂ ಹರಡಿ ಭಾರತೀಯರನ್ನು ಅಲುಗಾಡಿಸಿತು. ಪ್ರತಿಭಟನೆಗಳು ದೇಶಾದ್ಯಂತ ವ್ಯಕ್ತವಾದವು. ಪುಣೆ ನಗರದಲ್ಲೂ ಹೋರಾಟಗಳು ಉಗ್ರಸ್ವರೂಪವನ್ನು ಪಡೆದುಕೊಂಡಿತು. ಆಗ ಫರ್ಗೂಸನ್ ಕಾಲೇಜಿನಲ್ಲಿ ಓದುತ್ತಿದ್ದ ನಾರಾಯಣರಾಯರಿಗೆ ಸಹಜವಾಗಿ ರಾಷ್ಟ್ರಪ್ರೇಮ ಬೆಳೆಯಿತು. ಗೋಪಾಲಕೃಷ್ಣ ಗೋಖಲೆಯವರ ಭಾಷಣದ ಪ್ರಭಾವದಿಂದ ರಾಷ್ಟ್ರಾಭಿಮಾನ ಹೆಮ್ಮರವಾಯಿತು.

ತಾವು ಮಾತನಾಡುತ್ತಿದ್ದು ಭಾಷೆಗಳ ಮೂಲಕವೇ ದೇಶಾಭಿಮಾನವನ್ನು ಬೆಳೆಸಿಕೊಂಡು ಅಭಿವ್ಯಕ್ತಿಸುತ್ತಿದ್ದ ಚಾರಿತ್ರಿಕ ಘಟ್ಟ ಅದು. ಅಂತೆಯೇ ಪುಣೆಯಲ್ಲಿ ಮರಾಠಿ ನಾಟಕಗಳು ದೇಶಪ್ರೇಮವನ್ನು ಘಟ್ಟಿಗೊಳಿಸುವ ಕಾರ್ಯದಲ್ಲಿ ತೊಡಗಿದ್ದವು. ಈ ನಾಟಕಗಳ ಪ್ರೇರಣೆಯಿಂದ ನಾರಾಯಣರಾಯರಿಗೆ ಕನ್ನಡದಲ್ಲಿ ನಾಟಕಗಳನ್ನು ಬರೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿಸಲು ಮತ್ತು ಕನ್ನಡ ಭಾಷಾಭಿವೃದ್ಧಿಗಾಗಿ ತಾವು ಏನನ್ನಾದರು ಮಾಡಬೇಕು ಎಂಬ ಛಲ ಅಂಕುರಿಸಿತು.

ನಾರಾಯಣರಾಯರು ವಕೀಲಿ ವೃತ್ತಿಯಲ್ಲಿದ್ದಾಗ ಗದುಗಿನಲ್ಲಿ ನಡೆಯುತ್ತಿದ್ದ ಸಾಮಾಜಿಕ ಚಟುವಟಿಕೆಗಳಿಗೆ ಆಶ್ರಯದಾತರಾಗಿದ್ದು, ವಸಂತೋತ್ಸವ, ನಾಡಹಬ್ಬ, ಪುಸ್ತಕ ಬಿಡುಗಡೆ, ಕಾವ್ಯವಾಚನ, ಸಾಹಿತ್ಯ ಸಮ್ಮೇಳನ, ಮೊದಲಾದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಫೂರ್ತಿ ನೀಡುತ್ತಿದ್ದರು. ಅಷ್ಟೇ ಅಲ್ಲದೆ ತನು–ಮನ–ಧನ ದಿಂದ ತಮ್ಮ ಕೈಲಾದ ಮಟ್ಟಿಗೆ ಗದುಗಿನಲ್ಲಿಯ ಯಾವುದೇ ಕಾರ್ಯಕ್ರಮಗಳಿಗೆ ಸಹಾಯವನ್ನು ಸಲ್ಲಿಸುತ್ತಿದ್ದರು.

1971 ಜುಲೈ 4ರಂದು ಸ್ವರ್ಗಸ್ಥರಾದರು. ಆಗ ಅವರಿಗೆ ಎಂಬತ್ತೊಂಬತ್ತು ವರ್ಷವಾಗಿತ್ತು. ಅಲ್ಲಿಯ ಜನರು ಕೃತಜ್ಞತಾ ಪೂರ್ವಕವಾಗಿ ಗದುಗಿನ ಮಧ್ಯವರ್ತಿಸ್ಥಳಕ್ಕೆ 'ಹುಯಿಲುಗೋಳ ನಾರಾಯಣ ವೃತ್ತ' ಎಂದು ಹೆಸರಿಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಾರಾಯಣರ ಸುಂದರ ಶಿಲಾಮೂರ್ತಿಯೊಂದನ್ನು ಪೇಟೆಯ ಮಧ್ಯ ಸ್ಥಳದಲ್ಲಿ ನಗರಸಭೆಯವರು ನಿಲ್ಲಿಸಿದ್ದಾರೆ.

ತ್ರಿಕುಟೇಶ್ವರ ದೇವಸ್ಥಾನ ಒಂದು. ಇಲ್ಲಿ 3 ಲಿಂಗಗಳಿರುವುದರಿಂದ ಇದಕ್ಕೆ ಈ ಹೆಸರು. ಇದರ ಆವರಣದಲ್ಲಿಯೇ ಒಂದು ದೇವಸ್ಥಾನವಿದೆ. ಅದು ಸರಸ್ವತಿಯದು 12ನೇ ಶತಮಾನದಲ್ಲಿ ಕಟ್ಟಿರಬಹುದಾದ ವೀರನಾರಾಯಣ ದೇವಸ್ಥಾನ ಅತ್ಯಂತ ಪ್ರಸಿದ್ಧವಾದದ್ದು. ವಿಜಯನಗರದ ದೇವಸ್ಥಾನದಂತೆ ಗೋಪುರ ಎತ್ತರವಾಗಿದೆ. ಇಂದಿಗೂ ಸಭಾ ಮಂಟಪದಲ್ಲಿರುವ ಕಂಬವೊಂದು ಪ್ರೇಕ್ಷಕರಿಗೆ ಸಾರಿ ಹೇಳುತ್ತದೆ.

ಈ ಎರಡು ದೇವಾಲಯಗಳ ಟ್ರಸ್ಟ್ ಕಮೀಟಿಯ ಸದಸ್ಯರಾಗಿ ಸುಮಾರು 20ವರ್ಷ ಸೇವೆ ಸಲ್ಲಿಸಿದ ನಾರಾಯಣರಾಯರು, ಇವರ ಆಳ್ವಿಕೆಯಲ್ಲಿದ್ದ ಸಮಯದಲ್ಲಿ ವೆಂಕಟೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ್ದನ್ನು ಇಲ್ಲಿ ಉದಾಹರಿಸಬಹುದು. ಹೊಯ್ಸಳ ವಿಷ್ಣುವರ್ಧನನು ಕಟ್ಟಿಸಿದ 5 ವಿಷ್ಣು ದೇವಾಲಯಗಳಲ್ಲಿ ಇದು ಕೂಡಾ ಒಂದು ಎಂದು ಪ್ರತೀತಿ.

## ವಿಶ್ವ ಹಿಂದೂ ಪರಿಷತ್ತಿನ ಹಿರಿಯ ಕಾರ್ಯಕರ್ತ ಶ್ರೀ ಜೆ. ರಾಮಮೂರ್ತಿ ವಿಧಿವಶ – ಹಿರಿಯ ಪ್ರಚಾರಕರಾದ ಶ್ರೀ ಸು. ರಾಮಣ್ಣ ಸಂತಾಪ



ಕರ್ನಾಟಕ ದಕ್ಷಿಣ ವಿಶ್ವ ಹಿಂದೂ ಪರಿಷತ್ನ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿದ್ದ ಶ್ರೀ ಜೆ.ರಾಮಮೂರ್ತಿಯವರು ನಿಧನರಾಗಿದ್ದಾರೆ.

ವಿಶ್ವ ಹಿಂದೂ ಪರಿಷದ್‌ನ ಜ್ಯೇಷ್ಠ ಕಾರ್ಯಕರ್ತರಾದ ಜ. ರಾಮ ಮೂರ್ತಿಯವರು ಕರ್ನಾಟಕ ಪ್ರಾಂತ ಸಮಿತಿ ಸದಸ್ಯರಾಗಿ ಹಾಗೂ ಚಿತ್ರದುರ್ಗದ ಹಿಂದೂ ಮಹಾಗಣಪತಿಯ ಮಾರ್ಗದರ್ಶಕರಾಗಿ, ಗೌರವ ಅಧ್ಯಕ್ಷರಾಗಿ, ವಿಶ್ವ ಹಿಂದೂ ಪರಿಷತ್ ವೀರ ಮದಕರಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದವರು.

" ಶ್ರೀ ರಾಮಮೂರ್ತಿಯವರು ಸಂಘದ ಬಗ್ಗೆ ಸಂಪೂರ್ಣ ಬದ್ಧತೆಯಿದ್ದ ಸ್ವಯಂಸೇವಕರು. ವಿಶ್ವ ಹಿಂದೂ ಪರಿಷತ್ತಿನ ಕಟ್ಟಾಳು. ಚಿತ್ರದುರ್ಗದ ಹಿಂದೂ ಮಹಾ ಗಣಪತಿ ಉತ್ಸವದ ರೂವಾರಿ. ಕೊನೆಯ ಉಸಿರು ಇರುವವರೆಗೆ ಸಂಘಟನೆಯ, ಸಮಾಜದ, ಧರ್ಮದ ಕೆಲಸ ಮಾಡಿ, ಸಾಮಾನ್ಯ ಕಾರ್ಯಕರ್ತನ ಜೊತೆಯಾಗಿ ಎಲ್ಲರಿಗೂ ಮಾದರಿಯಾಗಿ, ಪ್ರೇರಣಾಶಕ್ತಿಯಾಗಿ ಇದ್ದಂತಹ ಹಿರಿಯರಾದ ರಾಮಮೂರ್ತಿ ಅವರಿಗೆ ಅಂತಿಮ ನಮಸ್ಕಾರಗಳು. ಎಲ್ಲಾ ಕಾರ್ಯಕರ್ತರ ಮನಸ್ಸಿನಲ್ಲಿ, ಹೃದಯದಲ್ಲಿ ನೀವು ಅಮರರಾಗಿ ಇರುತ್ತೀರಿ" ಎಂದು ಸಂಘದ ಹಿರಿಯ ಪ್ರಚಾರಕರಾದ ಸು. ರಾಮಣ್ಣನವರು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಎಲ್ಲೋ ಕೇಳಿದ ಕಥೆ

## ಯಾದವರಾವ್ ಜೋಷಿಯವರ ಸ್ನೇಹಪರತೆ

ಸ್ನೇಹಮಯತೆಯು ಯಾದವರಾವ್ ಜೋಷಿಯವರಿಗೆ ರಕ್ತಗತವಾಗಿದ್ದ ಗುಣವೇ ಹೊರತು ಪ್ರಯತ್ನ ಸಂಪಾದಿತವಾಗಿರಲಿಲ್ಲ. ಈ ಗುಣ ಅವರ ನಡವಳಿಕೆಯಲ್ಲಿ ಸದಾ ಎದ್ದುಕಾಣುತ್ತಿತ್ತು.

1987–88ರಲ್ಲಿ ಆಫ್ರಿಕಾದ ಕೀನ್ಯಾದ ರಾಜಧಾನಿ ನೈರೋಬಿಯಲ್ಲಿ ನಡೆದ ಅಖಿಲ–ಆಫ್ರಿಕ ಹಿಂದೂ ಸಮ್ಮೇಳನಕ್ಕೆ ವಿಶೇಷ ಆಮಂತ್ರಿತರಾಗಿ ಯಾದವರಾಯರು ಹೋಗಿದ್ದರು. ಕಿಸುಮು ನಗರದ ಮೇಯರ್ ಸೌಜನ್ಯಪೂರ್ಣವಾಗಿ ಯಾದವರಾಯರನ್ನು ಕುರಿತು "ನೀವು ನಮ್ಮ ಗೌರವಾನ್ವಿತ ಅತಿಥಿ" ಎಂದು ಉದ್ಗಾರ ಮಾಡಿದರು.

ಯಾದವರಾಯರು ಥಟ್ಟನೆ "ನಾನು ಅತಿಥಿಯಲ್ಲ, ನಿಮ್ಮ ಸೋದರ ಅಷ್ಟೇ" ಎಂದರು. ಯಾದವರಾಯರ ಆ ಸ್ವಭಾವಸಹಜ ಮಾತು ಆ ಮೇಯರ್ ಅವರನ್ನು ಭಾವಪುಲಕಿತಗೊಳಿಸಿತು. ಅವರು ಕುಳಿತಲ್ಲಿಂದ ಎದ್ದು ನಿಂತು ಯಾದವರಾಯರನ್ನು ಬಿಗಿದು ಅಪ್ಪಿಕೊಂಡರು. ತಮಗೆ ಪೂರ್ವಪರಿಚಯವಿಲ್ಲದ ಹಿರಿಯ ವ್ಯಕ್ತಿಯೊಬ್ಬರು ಮೊದಲ ಭೇಟಿಯಲ್ಲಿಯೇ ತಮ್ಮನ್ನು ಸೋದರ ಎಂದು ಸಂಬೋಧಿಸಿದುದು ಅವರ ಪಾಲಿಗೆ ಒಂದು ಅವಿಸ್ಮರಣೀಯ ಅನುಭವವಾಯಿತು.

ಯಾದವರಾಯರ ಸಂಪರ್ಕಕ್ಕೆ ಬಂದ ಎಲ್ಲರ ಮೇಲೂ ಪ್ರಭಾವ ಬೀರುತ್ತಿದ್ದುದು ಅವರ ಪ್ರೇಮಲತೆ. ತೀರಾ ಹದಿವಯಸ್ಸಿನ ಬಾಲಕನೊಬ್ಬ ಭೇಟಿಯಾಗಲು ಬಂದರೂ ಅವನು ಹೊರಡುವಾಗ ಈ ವೃದ್ಧಪಿತಾಮಹರು ತಲಬಾಗಿಲವರೆಗೂ ನಡೆದು ಬಂದು ಬೀಳ್ಕೊಡುತ್ತಿದ್ದುದು ಒಂದು ದೈನಂದಿನ ದೃಶ್ಯವಾಗಿತ್ತು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ, ಅರುಣ್ ಕಿರಿಮಂಜೇಶ್ವರ

# ಸಾಲುದ್ದದ ಸುದ್ದಿಗಳು



ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವಾದ ರೈಲ್ ಕೌಶಲ್ ವಿಕಾಸ್ ಯೋಜನೆ ಅಡಿಯಲ್ಲಿ ಇದುವರೆಗೆ 23,181 ಅಭ್ಯರ್ಥಿಗಳು ನೋಂದಣಿಯಾಗಿದ್ದಾರೆ ಮತ್ತು 15,665 ಅಭ್ಯರ್ಥಿಗಳು ತಮ್ಮ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದು ಸರ್ಕಾರ ಮಾಹಿತಿ ನೀಡಿದೆ. ರೈಲ್ವೇ ತರಬೇತಿ ಸಂಸ್ಥೆಗಳಲ್ಲಿ ಯುವಜನರಿಗೆ ಪ್ರವೇಶ ಮಟ್ಟದ ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ಅವರನ್ನು ಸಬಲೀಕರಣಗೊಳಿಸಲು, ಭಾರತೀಯ ರೈಲ್ವೇಯಲ್ಲಿ "ರೈಲ್ ಕೌಶಲ್ ವಿಕಾಸ್ ಯೋಜನೆ" (RKVY) ಆರಂಭಿಸಲಾಗಿದೆ.


ಖೇಲೋ ಇಂಡಿಯಾ ವಿಂಟರ್ ಗೇಮ್ಸ್ ನ ಮೂರನೇ ಆವೃತ್ತಿಯು ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಗುಲ್ಮಾರ್ಗ್‌ನಲ್ಲಿ ನಡೆಯಿತು. ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಐದು ದಿನಗಳ ಕಾಲ ನಡೆದ ಕ್ರೀಡಾಕೂಟದಲ್ಲಿ ದೇಶದ 1500 ಕ್ಕೂ ಹೆಚ್ಚು ಕ್ರೀಡಾಪಟುಗಳು ಒಂಬತ್ತು ವಿಭಿನ್ನ ಚಳಿಗಾಲದ ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಲಿದ್ದಾರೆ. ಮೊದಲ ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ ನಡೆಸಿದ ನಂತರ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ.

ಚೀನಾ ನಿರ್ಮಿತ ಕ್ಯಾಮೆರಾಗಳನ್ನು ಆಸ್ಟ್ರೇಲಿಯಾ ಸರ್ಕಾರ ತನ್ನ ಕಚೇರಿಗಳಿಂದ ತೆಗೆದುಹಾಕುತ್ತಿದೆ ಎಂದು ಮೂಲಗಳು ವರದಿ ಮಾಡಿವೆ. ಆಸ್ಟ್ರೇಲಿಯಾ ರಕ್ಷಣಾ ಸಚಿವ ರಿಚರ್ಡ್ ಮಾರ್ಲ್ಸ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಬೇಹುಗಾರಿಕೆಯ ಆತಂಕದ ಹಿನ್ನೆಲೆಯಲ್ಲಿ ಸರ್ಕಾರದ ಕಚೇರಿಗಳಲ್ಲಿರುವ ಚೀನಾ ನಿರ್ಮಿತ ಕ್ಯಾಮೆರಾಗಳನ್ನು ತೆಗೆದು ಹಾಕಲಾಗುತ್ತಿದೆ ಎಂದಿದ್ದಾರೆ.

ಭಾರತವು ಟರ್ಕಿಯ ಜನರೊಂದಿಗೆ ದೃಢವಾಗಿ ನಿಂತಿದೆ. ಆಪರೇಷನ್ ದೋಸ್ತ್ ಅಡಿಯಲ್ಲಿ ಗರಿಷ್ಠ ಸಂಖ್ಯೆಯ ಜೀವಗಳನ್ನು ಉಳಿಸಲು ಶ್ರಮಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಟರ್ಕಿ ಮತ್ತು ಸಿರಿಯಾ ದೇಶಗಳು ಭೂಕಂಪಕ್ಕೆ ಅಕ್ಷರಶಃ ನಲುಗಿ ಹೋಗಿದ್ದು, ಉಂಟಾದ ಆಸ್ತಿಪಾಸ್ತಿ ನಷ್ಟ ಊಹೆಗೂ ಮೀರಿದ್ದು ಎಂದು ಹೇಳಲಾಗುತ್ತಿದೆ. ಇಂತಹ ಕಠಿಣ ಸಂದರ್ಭದಲ್ಲಿ ಭಾರತವು ಆಪರೇಷನ್ ದೋಸ್ತ್ ಅಡಿಯಲ್ಲಿ ರಕ್ಷಣಾ ತಂಡವನ್ನು ಮತ್ತು ಸಾಮಾಗ್ರಿಗಳನ್ನು ಕಳುಹಿಸಿಕೊಟ್ಟು ತನ್ನಿಂದಾದ ಸಹಾಯ ಮಾಡುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನ ಯಲಹಂಕದ ಏರ್ ಫೋರ್ಸ್ ಸ್ಟೇಷನ್ನಲ್ಲಿ ಏರೋ ಇಂಡಿಯಾ 2023ರ 14ನೇ ಆವೃತ್ತಿಯನ್ನು ಉದ್ಘಾಟಿಸಿದರು. ಏರೋ ಇಂಡಿಯಾ 2023ರ ಥೀಮ್ 'The Runway to a Billion Opportunities' ಎಂಬುದಾಗಿತ್ತು. ಕಾರ್ಯಕ್ರಮ ಸ್ವದೇಶಿ ಉಪಕರಣಗಳು ಮತ್ತು ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಮತ್ತು 'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದ ವರ್ಲ್ಡ್' ಎಂಬ ಪ್ರಧಾನಿ ಮೋದಿಯವರ ದೃಷ್ಟಿಗೆ ಅನುಗುಣವಾಗಿ ವಿದೇಶಿ ಕಂಪನಿಗಳೊಂದಿಗೆ ಪಾಲುದಾರಿಕೆಯನ್ನು ರೂಪಿಸಲು ಕೇಂದ್ರೀಕರಿಸಲಾಯಿತು.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಇಡಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಬಗ್ಗೆ ಪ್ರಕಟಿಸಿದ್ದಾರೆ. ಕಳೆದ ಹಲವು ದಿನಗಳಿಂದ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಯಾರ ಹೆಸರಿಡಬೇಕು ಎಂಬುದರ ಬಗ್ಗೆ ಸುದೀರ್ಘ ಚರ್ಚೆಗಳು ನಡೆದಿದ್ದವು. ಯಡಿಯೂರಪ್ಪ ಸರ್ಕಾರಕ್ಕೆ ಪತ್ರ ಬರೆದು ರಾಷ್ಟ್ರಕವಿ ಕುವೆಂಪು ಹೆಸರಿಡಲು ಸಲಹೆಯನ್ನು ನೀಡಿದ್ದರು. ಬಿಎಸ್ ವೈ ಸಲಹೆಯಂತೆ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರಿಡಲು ನಿರ್ಧರಿಸಲಾಗಿದೆ. ಈ ವಿಮಾನ ನಿಲ್ದಾಣವನ್ನು ಶೀಘ್ರದಲ್ಲೇ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ ಎಂದು ವರದಿಗಳು ತಿಳಿಸಿವೆ.




ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮೆಗಾ ರಾಷ್ಟ್ರೀಯ ಬುಡಕಟ್ಟು ಉತ್ಸವ – ಆದಿ ಮಹೋತ್ಸವವನ್ನು ಉದ್ಘಾಟಿಸಿದರು. 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 1,000 ಬುಡಕಟ್ಟು ಕಲಾವಿದರು ಉತ್ಸವದಲ್ಲಿ ಭಾಗವಹಿಸಿದರು. 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 39 ವನ್ ಧನ್ ವಿಕಾಸ ಕೇಂದ್ರಗಳು ಈ ಮಹೋತ್ಸವದಲ್ಲಿ ಭಾಗವಹಿಸಿದರು.

ಲಘು ಯುದ್ಧ ವಿಮಾನ ತೇಜಸ್ ಅನ್ನು ಶೇಕಡಾ 100 ರಷ್ಟು ಸ್ವದೇಶಿಯನ್ನಾಗಿ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಮತ್ತು ಶೀಘ್ರದಲ್ಲೇ ಗುರಿ ಸಾಧಿಸಲಾಗುತ್ತದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. 'ಏರೋ ಇಂಡಿಯಾ' 2023ರ ಕರ್ಟನ್ ರೈಸರ್ ಅನ್ನು ಉದ್ದೇಶಿಸಿ ಮಾತನಾಡಿದ ರಕ್ಷಣಾ ಸಚಿವರು, ರಕ್ಷಣಾ ವಲಯಕ್ಕೆ ಸರ್ಕಾರವು 'ಆತ್ಮನಿರ್ಭರ ಯೋಜನೆ'ಯನ್ನು ಅಳವಡಿಸಿಕೊಂಡ ನಂತರ ಭಾರತದಿಂದ ರಕ್ಷಣಾ ರಫ್ತು ಹೆಚ್ಚಾಗಿದೆ ಎಂದರು.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದರ್ ಯಾದವ್ ದೇಶದ ಏಳು ರಾಜ್ಯಗಳಲ್ಲಿ ಏಳು ಹೊಸ ಇಎಸ್ಐಸಿ ಆಸ್ಪತ್ರೆಗಳನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಈ ಆಸ್ಪತ್ರೆಗಳು ಒಟ್ಟಾರೆಯಾಗಿ 880 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿರುತ್ತವೆ ಹಾಗೂ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತವೆ. ಬೆಳಗಾವಿ (ಕರ್ನಾಟಕ), ಶಂಶಾಬಾದ್ (ತೆಲಂಗಾಣ), ಬಾರಾಮತಿ (ಮಹಾರಾಷ್ಟ್ರ), ಕಿಶನ್ಗಢ್, ಅಜ್ಮೀರ್ (ರಾಜಸ್ಥಾನ), ಬಾಲಸೋರ್ (ಒಡಿಶಾ), ಕರ್ನೂಲ್ (ಆಂಧ್ರಪ್ರದೇಶ) ಮತ್ತು ಗ್ರೇಟರ್ ನೋಯ್ಡಾ (ಉತ್ತರ ಪ್ರದೇಶ)ದಲ್ಲಿ ಹೊಸ ಇಎಸ್ಐಸಿ ಆಸ್ಪತ್ರೆಗಳನ್ನು ಸ್ಥಾಪಿಸಲು ಸಭೆ ನಿರ್ಧರಿಸಿದೆ.



ಏರ್ ಇಂಡಿಯಾಕ್ಕೆ ಹೊಸ ವಿಮಾನಗಳನ್ನು ಪೂರೈಸಲು ಏರ್ಬಸ್ ಮತ್ತು ರೋಲ್ಸ್ ರಾಯ್ಸ್ನ ಬಹು ಶತಕೋಟಿ ಪೌಂಡ್ ಒಪ್ಪಂದವನ್ನು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಶ್ಲಾಘಿಸಿದ್ದಾರೆ. ಟಾಟಾ ಸಮೂಹವು ಏರ್ಬಸ್ನಿಂದ 250 ವಿಮಾನಗಳನ್ನು ಖರೀದಿಸಲಿದೆ, ಇದು ಇತಿಹಾಸದಲ್ಲಿ ವಿಶ್ವದ ಅತಿದೊಡ್ಡ ವಾಯುಯಾನ ಒಪ್ಪಂದವಾಗಿದೆ.

ಭಾರತದ ಚಂದ್ರಯಾನ ಕಾರ್ಯಾಚರಣೆಗೆ ಮಹತ್ವದ ಉತ್ತೇಜನ ದೊರೆತಿದೆ. ಚಂದ್ರಯಾನ–3ಗಾಗಿ ನಡೆಸಿದ EMI-EMC (ಎಲೆಕ್ಟ್ರೋ–ಮ್ಯಾಗ್ನೆಟಿಕ್ ಇಂಟರ್ಫರೆನ್ಸ್/ ಎಲೆಕ್ಟ್ರೋ–ಮ್ಯಾಗ್ನೆಟಿಕ್ ಕಾಂಪಾಟಿಬಿಲಿಟಿ) ಪರೀಕ್ಷೆಯು ಯಶಸ್ವಿಯಾಗಿದೆ. ಬಾಹ್ಯಾಕಾಶ ಪರಿಸರದಲ್ಲಿ ಉಪಗ್ರಹ ಉಪವ್ಯವಸ್ಥೆಗಳ ಕ್ರಿಯಾತ್ಮಕತೆಯನ್ನು ಮತ್ತು ನಿರೀಕ್ಷಿತ ವಿದ್ಯುತ್ಕಾಂತೀಯ ಮಟ್ಟಗಳೊಂದಿಗೆ ಅವುಗಳ ಹೊಂದಾಣಿಕೆಯನ್ನು ಖಚಿತಪಡಿಸಿಕೊಳ್ಳಲು ಉಪಗ್ರಹ ಕಾರ್ಯಾಚರಣೆಗಳಿಗಾಗಿ EMI-EMC ಪರೀಕ್ಷೆಯನ್ನು ನಡೆಸಲಾಗುತ್ತದೆ.

ಭಾರತೀಯ ಸೇನೆಯು ಛತ್ರಪತಿ ಶಿವಾಜಿ ಮಹಾರಾಜ್ ಜಯಂತಿಯನ್ನು LOC ಸಮೀಪದ ಮಚ್ಚಲ್ನಲ್ಲಿ ಆಚರಿಸಿತು. ನಂತರ ಮರಾಠಾ ಮೈದಾನದಲ್ಲಿ ಶಿವಾಜಿ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನೆಯೊಂದಿಗೆ ಬೃಹತ್ ಮೆರವಣಿಗೆಯನ್ನೂ ನಡೆಸಿದೆ. ಶತ್ರುಗಳ ವಿರುದ್ಧ ಹೋರಾಡುವ ಸೈನಿಕರು ಛತ್ರಪತಿ ಶಿವಾಜಿಯವರ ಪ್ರತಿಮೆಯನ್ನು ಪ್ರತಿದಿನ ನೋಡುವ ಮೂಲಕ ಅವರ ಆದರ್ಶಗಳು ಮತ್ತು ನೈತಿಕ ಮೌಲ್ಯಗಳಿಂದ ಪ್ರೇರೇಪಿಸಲ್ಪಡುವುದನ್ನು ಖಚಿತಪಡಿಸಿಕೊಳ್ಳಲು ಛತ್ರಪತಿ ಶಿವಾಜಿಯ ಪ್ರತಿಮೆಯನ್ನು ಅಮ್ಹಿ ಪುಣೇಕರ್ (ನಾವು ಪುಣೇಕರ್) ಎನ್ಜಿಒ ಎಲ್ಒಸಿಯಲ್ಲಿ ಸ್ಥಾಪಿಸಿದೆ. ಕಾಶ್ಮೀರದ ಕುಪ್ವಾರ ಜಿಲ್ಲಾಧಿಕಾರಿ ಡಾ. ಸಾಗರ್ ದತ್ತಾತ್ರೇಯ ದೋಯ್ಫೋಡೆ ಅವರ ಅನುಮತಿಯೊಂದಿಗೆ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

ರಾಮನಗರ ಜಿಲ್ಲೆಯ ರಾಮದೇವರ ಬೆಟ್ಟದಲ್ಲಿ ಭವ್ಯವಾದ ರಾಮ ಮಂದಿರವನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ. ವಿಧಾನಸಭೆಯಲ್ಲಿ 2023–24ನೇ ಸಾಲಿನ ಬಜೆಟ್ ಮಂಡನೆ ವೇಳೆ ಅವರು ಈ ಘೋಷಣೆ ಮಾಡಿದ್ದಾರೆ.

ಆಂಜನೇಯನ ಜನ್ಮಸ್ಥಳ ಎಂದು ನಂಬಲಾದ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದಲ್ಲಿ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 100 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಒಳಗೊಂಡ ವಿಸ್ತೃತ ಯೋಜನೆಯನ್ನು ರೂಪಿಸಲಾಗಿದೆ. ಇದಕ್ಕೆ ಟೆಂಡರ್ ಆಹ್ವಾನಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಅರುಣಾಚಲ ಪ್ರದೇಶವನ್ನು ಭಾರತದ ಅವಿಭಾಜ್ಯ ಅಂಗವೆಂದು ಪರಿಗಣಿಸುವ ಅಪರೂಪದ ನಿರ್ಣಯವನ್ನು ಯುಎಸ್ ಸೆನೆಟ್ನಲ್ಲಿ ಮೂವರು ಸೆನೆಟರ್ಗಳ ನೇತೃತ್ವದಲ್ಲಿ ಪರಿಚಯಿಸಲಾಗಿದೆ. ಈ ನಿರ್ಣಯ ಭಾರತದ ಸಾರ್ವಭೌಮತ್ವ ಮತ್ತು ಪ್ರಾದೇಶಿಕತೆಯನ್ನು ಬೆಂಬಲಿಸುತ್ತದೆ, ಅಲ್ಲದೇ ಈ ಭಾಗದಲ್ಲಿ ಮಿಲಿಟರಿ ಬಲ ಪ್ರದರ್ಶಿಸುವ ಮೂಲಕ ಬೆದರಿಕೆಯೊಡ್ಡುತ್ತಿರುವ ಚೀನಾ ನಿಲುವನ್ನು ನಿರ್ಣಯವು ಖಂಡಿಸಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್ಬಿಐ) ಅಮೆಜಾನ್ ಪೇ, ಗೂಗಲ್ ಇಂಡಿಯಾ, ರಿಲಯನ್ಸ್ ಪೇಮೆಂಟ್ ಸೊಲ್ಯೂಷನ್ಸ್ ಸೇರಿದಂತೆ 32 ಸಂಸ್ಥೆಗಳಿಗೆ ಪೇಮೆಂಟ್ ಅಗ್ರಿಗೇಟರ್ ಆಗಿ ತಾತ್ವಿಕ ಅನುಮೋದನೆ ನೀಡಿದೆ. ಫೋನ್ಪೇ ಮತ್ತು ಭಾರ್ತಿಪೇ ಸೇವೆಗಳು ಸೇರಿದಂತೆ 18 ಇತರ ಅಪ್ಲಿಕೇಶನ್ಗಳನ್ನು ಪರಿಗಣಿಸಲಾಗುತ್ತಿದೆ ಎಂದು ಆರ್ಬಿಐ ಹೇಳಿದೆ. ಆಕ್ಸಿಸ್ ಬ್ಯಾಂಕ್ ನೇತೃತ್ವದ ಫ್ರೀಚಾರ್ಜ್, ಪೇಟಿಎಂ ಪಾವತಿಗಳು ಮತ್ತು ಪೇಯು ಪಾವತಿಗಳು ಸೇರಿದಂತೆ ನಾಲ್ಕು ಅಗ್ರಿಗೇಟರ್ಗಳ ಅರ್ಜಿಗಳನ್ನು ಆರ್ಬಿಐ ಹಿಂದಿರುಗಿಸಿದೆ.



ಭಾರತ ಮತ್ತು ಸ್ಪೇನ್ ದೇಶಗಳ ನಡುವೆ ಬೆಳೆಯುತ್ತಿರುವ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸ್ಪ್ಯಾನಿಷ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಅಧಿಕೃತ ಹೇಳಿಕೆಯ ಪ್ರಕಾರ, ಉಭಯ ನಾಯಕರು ಪರಸ್ಪರ ಹಿತಾಸಕ್ತಿಯ ಹಲವಾರು ದ್ವಿಪಕ್ಷೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಬಗ್ಗೆಯೂ ಚರ್ಚಿಸಿದರು. ಪ್ರಸ್ತುತ ನಡೆಯುತ್ತಿರುವ ದ್ವಿಪಕ್ಷೀಯ ಉಪಕ್ರಮಗಳನ್ನು ಉಭಯ ನಾಯಕರು ಪರಿಶೀಲಿಸಿದ್ದಾರೆ ಮತ್ತು ಇತ್ತೀಚಿನ ಉನ್ನತ ಮಟ್ಟದ ವಿನಿಮಯ ಮತ್ತು ರಕ್ಷಣೆ, ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಸಹಕಾರಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ಡಿಜಿಟಲ್ ಮೂಲಸೌಕರ್ಯ, ಹವಾಮಾನ ಕ್ರಮ, ಶುದ್ಧ ಇಂಧನ ಪರಿವರ್ತನೆ ಮತ್ತು ಸುಸ್ಥಿರ ಅಭಿವೃದ್ಧಿಯಂತಹ ವಿಷಯಗಳಲ್ಲಿ ಸಹಕರಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

13,862 ಅಡಿ ಎತ್ತರದಲ್ಲಿರುವ ಲಡಾಖ್ನ ಪ್ಯಾಂಗೊಂಗ್ ತ್ಸೋ ಸರೋವರದಲ್ಲಿ ಭಾರತದ ಮೊದಲ "ಹೆಪ್ಪುಗಟ್ಟಿದ ಸರೋವರ ಮ್ಯಾರಥಾನ್ (frozen-lake marathon)" ಅನ್ನು ಫೆಬ್ರವರಿ 20 ರಂದು ನಡೆಯಿತು. 1 ಕಿಲೋಮೀಟರ್ಗಳ ಮ್ಯಾರಥಾನ್, ಲುಕುಂಗ್ನಲ್ಲಿ ಆರಂಭಗೊಂಡು ಮಾನ್ ಗ್ರಾಮದಲ್ಲಿ ಕೊನೆಗೊಂಡಿತು. ಭಾರತ ಮತ್ತು ವಿದೇಶದಿಂದ ಆಯ್ದ 75 ಕ್ರೀಡಾಪಟುಗಳು ಓಟದಲ್ಲಿ ಭಾಗವಹಿಸಿದರು. ವಿಶ್ವದ ಅತಿ ಎತ್ತರದ "ಹೆಪ್ಪುಗಟ್ಟಿದ ಸರೋವರ ಮ್ಯಾರಥಾನ್" ಗಾಗಿ ಗಿನ್ನೆಸ್ ವಿಶ್ವ ದಾಖಲೆ ಮಾಡಲು ಭಾಗವಹಿಸುವವರಿಗೆ ಅವಕಾಶ ಸಿಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸಾಂಕ್ರಾಮಿಕ ಸೇರಿದಂತೆ ಇತರ ಕಾರಣಗಳಿಂದ ಕಳೆದ ಮೂರು ವರ್ಷಗಳಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತದ ಸಮುದ್ರ ಆಹಾರಗಳ ರಫ್ತು ಈ ಬಾರಿ ಮತ್ತೆ ಚೇತರಿಕೆಯನ್ನು ಕಂಡಿದೆ. ದೇಶದ ಸಮುದ್ರಾಹಾರ ರಫ್ತು FY 2022–23 ರಲ್ಲಿ US $ 8 ಶತಕೋಟಿಯ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. 2021–22ರ ಅವಧಿಯಲ್ಲಿ, ಭಾರತವು ರೂಪಾಯಿ 575.86 ಶತಕೋಟಿ ಮೌಲ್ಯದ 13,69,264 ಟನ್ನಗಳಷ್ಟು ಸಮುದ್ರ ಉತ್ಪನ್ನಗಳನ್ನು ರಫ್ತು ಮಾಡಿದೆ. ಸೀಗಡಿ ಉತ್ಪಾದನೆಯು ಒಂದು ಮಿಲಿಯನ್ ಮಿಲಿಯನ್ ಟನ್ ದಾಟಿದೆ. ಘನೀಕೃತ ಸೀಗಡಿ ಪ್ರಮಾಣ ಮತ್ತು ಮೌಲ್ಯದಲ್ಲಿ ಪ್ರಮುಖ ರಫ್ತು ವಸ್ತುವಾಗಿ ಉಳಿದಿದ್ದು ಪ್ರಮಾಣದಲ್ಲಿ 53 ಪ್ರತಿಶತ ಮತ್ತು ಒಟ್ಟು ಆದಾಯದ 75 ಪ್ರತಿಶತದಷ್ಟು ಪಾಲನ್ನು ಹೊಂದಿದೆ.



ಭಾರತವು ಈಜಿಪ್ಟ್ ಮತ್ತು ಅರ್ಜೆಂಟೀನಾದೊಂದಿಗೆ ದೇಶೀಯವಾಗಿ ನಿರ್ಮಿತ ತೇಜಸ್ ಲಘು ಯುದ್ಧ ವಿಮಾನದ (ಎಲ್ಸಿಎ) ಮಾರಾಟಕ್ಕಾಗಿ ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಭಾರತವು ವಿದೇಶಿ ಮಾರುಕಟ್ಟೆಗಳಲ್ಲಿ ಹಿಡಿತ ಸಾಧಿಸಲು ಮತ್ತು ರಕ್ಷಣಾ ರಫ್ತುಗಳನ್ನು ಹೆಚ್ಚಿಸಲು ಗಮನವನ್ನು ತೀಕ್ಷ್ಣಗೊಳಿಸುತ್ತಿದ್ದು, ತೇಜಸ್ ಲಘು ಯುದ್ಧ ವಿಮಾನ ಮಾರಾಟಕ್ಕೆ ಸಂಬಂಧಿಸಿದಂತೆ ಈಜಿಪ್ಟ್ ಮತ್ತು ಅರ್ಜೆಂಟೀನಾ ಜೊತೆ ಮಾತುಕತೆ ನಡೆಸುತ್ತಿದೆ ಎಂದು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್) ಅಧ್ಯಕ್ಷ ಸಿಬಿ ಅನಂತಕೃಷ್ಣನ್ ಏರೋ ಇಂಡಿಯಾ–2023ರಲ್ಲಿ ಹೇಳಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th FEBRUARY 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-03-2023



# ಚಿಂತನ–ಮಂಥನಕ್ಕೆ ಸಾಕ್ಷಿಯಾದ ಎರಡು ದಿನಗಳ ಮಂಗಳೂರು ಲಿಟ್ ಫೆಸ್ಟ್ – 2023

ಮಂಗಳೂರು: ಮಂಗಳೂರು ಲಿಟ್ ಫೆಸ್ಟ್ 2023 ಐದನೇ ಆವೃತ್ತಿಯು ಮಂಗಳೂರಿನ ಟಿ.ಎಂ.ಎ ಪೈ ಸಭಾಂಗಣದಲ್ಲಿ ಫೆ.18 ಮತ್ತು 19ರಂದು ಜರುಗಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕ ಹಾಗೂ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿ ವಿ.ನಾಗರಾಜ್ ದೀಪ ಬೆಳಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಲಿಟ್ ಫೆಸ್ಟ್ ಮೂಲಕ ವರ್ತಮಾನದ ದೇಶ, ಭಾಷೆ, ಕಲೆ, ಸಂಸ್ಕೃತಿಯ ಅನಾವರಣವಾಗುತ್ತದೆ. ಸಾಹಿತ್ಯವು ದೇಶದ ಸಂಸ್ಕೃತಿ ಮತ್ತು ಕಾಲವನ್ನು ಪ್ರತಿಬಿಂಬಿಸುತ್ತದೆ. ಕಳೆದ ಹಲವು ದಶಕಗಳು ನಮ್ಮದಲ್ಲದ ವಿಚಾರಗಳಿಂದ ತುಂಬಿಹೋಗಿತ್ತು, ಆದರೆ ಇಂದು ಕಾಲ ಬದಲಾಗಿದೆ. ಐಡಿಯಾ ಆಫ್ ಭಾರತ್ ಮೂಲಕ ದೇಶದ ಇತಿಹಾಸ, ಸಾಹಿತ್ಯ, ಕಲೆ, ಸಂಸ್ಕೃತಿಯ ಅನಾವರಣ ನಡೆಯುತ್ತಿದೆ ಎಂದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಿಟ್ಟೆ ಉಪಕುಲಪತಿ ವಿನಯ್ ಹೆಗ್ಡೆ ಅವರು ಮಾತನಾಡಿ ಮಂಗಳೂರು ಪ್ರದೇಶವು ಧಾರ್ಮಿಕವಾಗಿ, ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಬಹಳ ಎತ್ತರಕ್ಕೆ ಏರಿದ ಸ್ಥಳವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿಯೇ ಮಂಗಳೂರು ಪ್ರದೇಶಕ್ಕೆ ವಿಶೇಷ ಸ್ಥಾನವಿತ್ತು. ಭೌಗೋಳಿಕವಾಗಿಯೂ ಶ್ರೀಮಂತಿಕೆ ಹೊಂದಿರುವ ಈ ಪ್ರದೇಶದಲ್ಲಿ ಆಯೋಜಿಸಲಾದ ಲಿಟ್ ಫೆಸ್ಟ್ ವಿಶ್ವಕ್ಕೆ ಮಾದರಿಯಾಗಲಿ ಎಂದು ಶುಭ ಹಾರೈಸಿದರು.






ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಸ್ವರಾಜ್ಯ ಪತ್ರಿಕೆಯ ಸಂಪಾದಕೀಯ ಮಂಡಳಿ ನಿರ್ದೇಶಕ ಆರ್.ಜಗನ್ನಾಥನ್ ಮಾತನಾಡಿ ಭಾರತದ ಚಿಂತನೆ ಧರ್ಮದ ಚಿಂತನೆಯೇ ಆಗಿದೆ. ಚಾಣಕ್ಯ ಸೂತ್ರದಲ್ಲಿ ತಿಳಿಸಿದಂತೆ ದೇಶ ಸುಭೀಕ್ಷೆಯಲ್ಲಿರಬೇಕೆಂಬುದರ ಮೂಲ ಧರ್ಮವೇ ಆಗಿದೆ. ನಂತರದಲ್ಲಿ ಉತ್ತಮ ಆರ್ಥಿಕ ನೀತಿಯು ದೇಶವನ್ನು ಉನ್ನತ ಸ್ಥಾನಕ್ಕೆ ಏರಿಸುತ್ತದೆ. ವರ್ತಮಾನದ ಭಾರತವು ಇದೇ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದರು.

ಲಿಟ್ ಫೆಸ್ಟ್ 2023 ಉದ್ಘಾಟನಾ ಕಾರ್ಯಕ್ರಮದಲ್ಲಿ ಜಾನಪದ, ಇತಿಹಾಸ ಕ್ಷೇತ್ರಗಳಲ್ಲಿ ವಿಶೇಷ ಸಾಧನೆಗೈದ ತುಕಾರಾಂ ಪೂಜಾರಿ ಅವರಿಗೆ ಲಿಟ್ ಫೆಸ್ಟ್ 2023ರ ಜೀವಮಾನದ ಶ್ರೇಷ್ಠ ಸಾಧನ ಪ್ರಶಸ್ತಿ ಪ್ರದಾನಿಸಿ ಅಭಿನಂದಿಸಲಾಯಿತು.

ಜೀವಮಾನ ಸಾಧಕ ಪ್ರಶಸ್ತಿ ಸ್ವೀಕರಿಸಿದ ತುಕಾರಾಂ ಪೂಜಾರಿ ಮಾತನಾಡಿ ನಮ್ಮ ಪೂರ್ವಜರಿಗೆ ಅಕ್ಷರ ಜ್ಞಾನ ಇಲ್ಲದಿದ್ದರೂ ಪ್ರಕೃತಿ ಮತ್ತು ಸಂಸ್ಕೃತಿಯ ಜ್ಞಾನ ಉತ್ತಮವಾಗಿತ್ತು. ಅವರಿಂದಲೇ ನಮ್ಮ ಸಂಸ್ಕೃತಿಯು ಈ ತನಕ ಹರಿದು ಬಂದಿದೆ. ಅದಕ್ಕೆ ನಾವು ಋಣಿಯಾಗಿರಬೇಕಿದೆ ಎಂದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಪಲ್ಲಕ್ಕಿಯ ಮೂಲಕ ಪುಸ್ತಕಗಳ ಮೆರವಣಿಗೆಯು ಲಿಟ್ ಫೆಸ್ಟ್ ನಡೆಯುವ ಟಿ.ಎಂ.ಎ ಪೈ ಸಭಾಂಗಣದವರೆಗೂ ನಡೆಯಿತು. ಹಿರಿಯ ಜಾನಪದ ಕಲಾವಿದೆ ಭವಾನಿ ಅಮ್ಮ ಪೆರ್ಗಡೆ ಅವರು ಪಾಡ್ದನ ಗೀತೆ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಭಾರತ್ ಫೌಂಡೇಶನ್ ಟ್ರಸ್ಟಿ ಸುನಿಲ್ ಕುಲಕರ್ಣಿ ಸ್ವಾಗತ ಭಾಷಣ ಮಾಡಿದರು.

ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ಒಟ್ಟು 25 ಸಂವಾದ ಕಾರ್ಯಕ್ರಮಗಳು ಜರುಗಿದವು. 55 ಜನ ಸಂಪನ್ಮೂಲ ವ್ಯಕ್ತಿಗಳು ಈ ಸಂವಾದದಲ್ಲಿ ಭಾಗವಹಿಸಿದರು. ಹಿಂದುತ್ವ: ಪುಸ್ತಕ ಸಂವಾದ, ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆ, Changing Media Landscape, ಅತ್ಯುನ್ನತ ತತ್ತ್ವ, ದುರ್ಬಲ ಸಮಾಜ: ವಿರೋಧಾಭಾಸದ ಒಳನೋಟ, Idea of Bharath - Hindutva, Dharma and the way forward, ಬಹುವಚನಕ್ಕೊಂದೇ ತತ್ತ್ವ: ಪುಸ್ತಕ ಸಂವಾದ, Life of an Industani - Book Discussion, From India to the World: Musings on democracy and policy. ಮಾಧ್ಯಮ ಮತ್ತು ಆಖ್ಯಾಯಿಕೆ – ಪ್ರಾದೇಶಿಕ, ರಾಷ್ಟ್ರೀಯ ಮತ್ತು ಜಾಗತಿಕ ಎಂಬ ಅಸ್ಮಿತೆಗಳು: ಒಂದು ವಿವೇಚನೆ, Armed to lead - Indias Way Ahead, Need for Shifting Global




Narrative On India, ಪ್ರಸಕ್ತ ಕಾಲಘಟ್ಟದಲ್ಲಿ ಯಕ್ಷಗಾನ, Stories of Warriors, Cinema and Culture - When local is Universal, ಪುರಾಣದ ಕಥೆ: ಹೊಸ ರೂಪ – ಹೊಸ ದೃಷ್ಟಿ, ರಂಗಭೂಮಿ: ಪ್ರಯೋಗ ಮತ್ತು ಪ್ರಭಾವ, ರಾಷ್ಟ್ರಕವಿ ಗೋವಿಂದ ಪೈ – ಒಂದು ಸ್ಮರಣೆ, Saga Of Maratha Naval Force, ಸಾಹಿತ್ಯ: ಒಳನೋಟ–ಹೊರನೋಟ, ಕರಾವಳಿಯ ಭಾಷಾ ಸಾಮರಸ್ಯ, Culture, caricature and creativity, ದಕ್ಕಲ ಜಾಂಬವ ಪುರಾಣ, ಆರ್ಯ: ಪುಸ್ತಕ ಸಂವಾದ ಎಂಬ ವಿಷಯಗಳ ಕುರಿತು ಸಂವಾದಗಳು ನಡೆದವು. ಕಳೆದ ಆವೃತ್ತಿಗಳಿಗಿಂತ ಈ ಬಾರಿ ಹರಟೆ ಕಟ್ಟೆ ಪರಿಕಲ್ಪನೆ ಆಗಮಿಸಿದ ಜನತೆಗೆ ಹೆಚ್ಚು ಮುದ ನೀಡುವಲ್ಲಿ ಯಶಸ್ವಿಯಾಯಿತು.

# ಗ್ರಾಹಕರ ಅರಿವು, ದೇಶದ ಬಲವು

*1ನೇ ಪುಟದಿಂದ...*

ಅಥವಾ ಸೇವೆಗಳಲ್ಲಿನ ಕೊರತೆಯಿಂದ ಉಂಟಾಗುವ ನಷ್ಟ ಅಥವಾ ಹಾನಿಯನ್ನು ಸರಿದೂಗಿಸಲು ಉತ್ಪಾದಕ ಅಥವಾ ಉತ್ಪನ್ನ ಸೇವಾ ಪೂರೈಕೆದಾರ ಅಥವಾ ಉತ್ಪನ್ನ ಮಾರಾಟಗಾರ ಈಗ ಜವಾಬ್ದಾರನಾಗಿರುತ್ತಾನೆ.

ಪ್ರಸ್ತುತ, ಗ್ರಾಹಕನಿಗೆ ನ್ಯಾಯಾಲಯದ ಪ್ರವೇಶ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಆದರೆ ಸಿಸಿಪಿಎ ಮೂಲಕ ಹೆಚ್ಚುವರಿ ಸ್ವಿಫ್ಟ್ ಕಾರ್ಯನಿರ್ವಾಹಕ ಪರಿಹಾರಗಳನ್ನು ಕಾಯಿದೆಯಲ್ಲಿ ಪ್ರಸ್ತಾಪಿಸಲಾಗಿದೆ. ಜನರ ದಾರಿತಪ್ಪಿಸುವ ಜಾಹೀರಾತುಗಳು ಮತ್ತು ಉತ್ಪನ್ನಗಳ ಕಲಬೆರಕೆಗಳನ್ನು ಪರೀಕ್ಷೆ ಹಾಗೂ ತಡೆಗಾಗಿ ಶಿಕ್ಷೆಯ ನಿಬಂಧನೆಗಳೂ ಕಾಯ್ದೆಯಲ್ಲಿದೆ. ತಯಾರಕರು ಮತ್ತು ಸೇವಾ ಪೂರೈಕೆದಾರರನ್ನು ದೋಷಯುಕ್ತ ಉತ್ಪನ್ನಗಳು ಅಥವಾ ಸೇವೆಗಳ ಕೊರತೆಗೆ ಹೊಣೆಗಾರರನ್ನಾಗಿಸಲು ಇದರಿಂದ ಸಾಧ್ಯವಾಗಲಿದೆ. ಗ್ರಾಹಕರ ಹಿತಾಸಕ್ತಿ ಸಂರಕ್ಷಣೆಯ ಮೇಲೆ ಕೇಂದ್ರೀಕರಿಸಿ ಇ–ಕಾಮರ್ಸ್ ಮತ್ತು ನೇರ ಮಾರಾಟದ ಬಗ್ಗೆ ನಿಯಮಗಳನ್ನು ಈ ಕಾಯ್ದೆಯು ಇನ್ನಷ್ಟು ಸಶಕ್ತಗೊಳಿಸುತ್ತದೆ.

ಗ್ರಾಹಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಹಕ ಸಂರಕ್ಷಣಾ ಕಾಯ್ದೆ–1986 ರಲ್ಲಿ ಗ್ರಾಹಕರು ಪ್ರಕರಣ ದಾಖಲಿಸುವುದಕ್ಕೆ ಅವಕಾಶವಿರಲಿಲ್ಲ. ಆದರೆ ಗ್ರಾಹಕ ಸಂರಕ್ಷಣಾ ಕಾಯ್ದೆ–2019ರಲ್ಲಿ ಗ್ರಾಹಕರು ಪ್ರಕರಣ ದಾಖಲಿಸುವುದಕ್ಕೆ ಅವಕಾಶವಿದೆ. ಗ್ರಾಹಕರಿಗೆ ಸಂಬಂಧಿಸಿದ ದೂರುಗಳ ಮೇಲೆ ತಕ್ಷಣ ಕ್ರಮಕೈಗೊಳ್ಳಲಾಗುವುದು. ಗ್ರಾಹಕರ ದಾರಿತಪ್ಪಿಸುವ ಜಾಹೀರಾತು ನೀಡಿದರೆ ಕ್ರಮ ತೆಗೆದುಕೊಳ್ಳಲಾಗುವುದು. ಗ್ರಾಹಕರು ದೂರುಗಳು ಪರಿಣಾಮಕಾರಿ, ತ್ವರಿತವಾಗಿ ಇತ್ಯರ್ಥ ಮಾಡುವುದಾಗಿ ಭರವಸೆ ನೀಡಿದ್ದಾರೆ.

### ನೂತನ ಗ್ರಾಹಕ ಸಂರಕ್ಷಣಾ ಕಾಯ್ದೆ–2019: ಗ್ರಾಹಕರು ತಿಳಿಯಬೇಕಾದ ಮಹತ್ವದ ಬದಲಾವಣೆಗಳು:

#### ದೂರು–ಪರಿಹಾರ

ದೇಶದ ಎಲ್ಲಾ ರಾಜ್ಯಗಳಲ್ಲಿ ಹಾಗೂ ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಸ್ಥಾಪಿಸಿ ಗ್ರಾಹಕರನ್ನು ಸಂರಕ್ಷಿಸುವುದು. ಕೇಂದ್ರ ಸರಕಾರದ ಉದ್ದೇಶದಿಂದ ಈ ಕಾಯ್ದೆ ಅಸ್ತಿತ್ವದಲ್ಲಿದೆ. ಸರಕು, ಸೇವೆ ಬೆಲೆ, ಪರಿಹಾರ ಧನದ ಮೊತ್ತ 20 ಲಕ್ಷ ರೂ.ವರೆಗೆ ಇದ್ದಲ್ಲಿ ಜಿಲ್ಲಾ ವೇದಿಕೆಗೆ ದೂರು ಸಲ್ಲಿಸಬಹುದು.

ಗ್ರಾಹಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಹಕ ಸಂರಕ್ಷಣಾ ಕಾಯ್ದೆ–1986 ರಲ್ಲಿ ಗ್ರಾಹಕರು ಪ್ರಕರಣ ದಾಖಲಿಸುವುದಕ್ಕೆ ಅವಕಾಶವಿರಲಿಲ್ಲ. ಆದರೆ ಗ್ರಾಹಕ ಸಂರಕ್ಷಣಾ ಕಾಯ್ದೆ–2019 ರಲ್ಲಿ ಗ್ರಾಹಕರು ಪ್ರಕರಣ ದಾಖಲಿಸುವುದಕ್ಕೆ ಅವಕಾಶವಿದೆ. ಗ್ರಾಹಕರಿಗೆ ಸಂಬಂಧಿಸಿದ ದೂರುಗಳ ಮೇಲೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಗ್ರಾಹಕರ ದಾರಿತಪ್ಪಿಸುವ ಜಾಹೀರಾತು ನೀಡಿದರೆ ಕ್ರಮ ತೆಗೆದುಕೊಳ್ಳಲಾಗುವುದು. ಗ್ರಾಹಕರು ದೂರುಗಳು ಪರಿಣಾಮಕಾರಿ, ತ್ವರಿತವಾಗಿ ಇತ್ಯರ್ಥ ಮಾಡುವುದಾಗಿ ಭರವಸೆ ನೀಡಿದ್ದಾರೆ.

#### ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

ಗ್ರಾಹಕ ಸಂರಕ್ಷಣಾ ಕಾಯ್ದೆ–2019 ರಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯನ್ನು "ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ" ಎಂದು ತಿದ್ದುಪಡಿ ಮಾಡಲಾಗಿದೆ. ಗ್ರಾಹಕರು ಇನ್ನು ಮುಂದೆ ಗ್ರಾಹಕ ಸಂರಕ್ಷಣಾ ಕಾಯ್ದೆ 2019 ಕಲಂ 35ರಡಿ ದೂರು ಸಲ್ಲಿಸಬೇಕಾಗುತ್ತದೆ. ಗ್ರಾಹಕರು ಎಲ್ಲಿ ವಾಸವಿರುವರೋ ಅಥವಾ ಆಯಾ ಜಿಲ್ಲೆಯ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದೂರು ಸಲ್ಲಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಗ್ರಾಹಕರ ತಮ್ಮ ವಾಸದ ಜಿಲ್ಲಾ ವ್ಯಾಪ್ತಿಯಲ್ಲೆ ದೂರನ್ನು ಸಲ್ಲಿಸಲು ಅನುಕೂಲವಾಗಿದೆ.

ಗ್ರಾಹಕರು ಕೋರುವ ನಷ್ಟ ಪರಿಹಾರದ ಮಿತಿ ಇಪ್ಪತ್ತು ಲಕ್ಷದಿಂದ ಒಂದು ಕೋಟಿ ರೂ.ಗೆ ಏರಿಕೆಯಾಗಿದ್ದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಒಂದು ಕೋಟಿ ರೂ. ವರೆಗಿನ ಮೊತ್ತಕ್ಕೆ ಸಂಬಂಧಿಸಿದ ದೂರು ದಾಖಲಿಸಬಹುದಾಗಿದೆ. ದೂರು ಶುಲ್ಕವನ್ನು ಡಿ.ಡಿ. ರೂಪದಲ್ಲಿ ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಡಿ.ಡಿ.ಯನ್ನು ಪಡೆದು ದೂರಿನೊಂದಿಗೆ ಲಗತ್ತಿಸಿ ಸಲ್ಲಿಸಬೇಕಾಗಿದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021